
# ಭಗವಂತನ ಸುಂದರ ಅಕ್ಷರ



ವಾಗೀಶ ಹೆಗಡೆ

ನೀನು ಆ ಭಗವಂತ ಬರೆದ ಅತಿ ಸುಂದರ ಅಕ್ಷರ
ನಾನು ಎಂಬ ಗೂಢಲಿಪಿಯನ್ನು ಓದಿದವನೂ ನೀನೆ
ಲೋಕ ಓದಿದ್ದು ಕೇವಲ ತನಗೆ ಪರಿಚಿತ ಲಿಪಿಯಲ್ಲಿದ್ದ ನನ್ನ
ಅದಕ್ಕೇ ಆತ್ಮಬಂಧು ನನಗೆ ನೀನು ಬೇಕು ಈ ಲೋಕ ಬೇಡ

ಪ್ರತಿಯೊಂದಕ್ಕೂ ಒಂದೊಂದು ತರಂಗಾಂತರ
ಜೀವ ಮಿಡಿಯುವುದು ತನಗೆ ಅನುರಣಿಸುವುದಕ್ಕೆ ಮಾತ್ರ
ನಾ ಮಿಡಿದದ್ದು ನಿನಗೆ ನೀ ಮಿಡಿದದ್ದು ನನಗೆ
ಅದಕ್ಕೇ ಆತ್ಮಬಂಧು ನನಗೆ ನೀನು ಬೇಕು ಈ ಲೋಕ ಬೇಡ

ಎಲ್ಲಿಂದ ಹುಟ್ಟುತ್ತವೆ, ಆನಂದಬಾಷ್ಪ ಅಮರ ಅಕ್ಷರ, ಎಲ್ಲಿಂದ
ಹುಟ್ಟುತ್ತದೆ ಈ ಜೀವಕ್ಕಾಗಿ ಬದುಕಬೇಕೆಂಬ ಭಾವ, ಹೊಸತ
ಕಲಿಯುವ ಉತ್ಸಾಹ, ನೀ ಇರುವುದು ಅಲ್ಲೇ ನನ್ನಾಣೆ,
ಅದಕ್ಕೇ ಆತ್ಮಬಂಧು ನನಗೆ ನೀನು ಬೇಕು ಈ ಲೋಕ ಬೇಡ

ಹೃದಯದಿ ಆಯುಧ ಅಡಗಿಸಿಡದ ಹೂ ನೀನು, ಮುಟ್ಟದೆಯೆ
ಮುಟ್ಟಿದವನು, ನಾ ನೋಯುವ ಮೊದಲೇ ನನಗಾಗಿ ನೊಂದವನು
ನೀ ನನಗೆ ಬೇಕು ಸ್ವಾರ್ಥಕ್ಕಲ್ಲ ಬಾಳ ಭಾವಾರ್ಥಕ್ಕಾಗಿ ಎಂದವನು
ಅದಕ್ಕೇ ಆತ್ಮಬಂಧು ನನಗೆ ನೀನು ಬೇಕು ಈ ಲೋಕ ಬೇಡ

● ಎಲ್.ಜಿ. ಮೀರಾ